ತಿಳಿಯಿತು. ಇರಲಿ ಬಿಡು. ಈ ಇ–ಮೇಲು ಕೂಡಾ ನನಗೇ ವಾಪಸು ಬರದಿದ್ದರೆ ಸಾಕು... ಮಳೆ ನಿಂತ ಮೇಲೆ ಇನ್ನೊಮ್ಮೆ ಬರೆಯುವೆ.

ಮಕ್ಕಳ ಮುದ್ದಿನ ಮುತ್ತುಗಳು. ಜೊತೆಗೇ ನನ್ನದೂ...

★★★

ನನ್ನ ಪ್ರೀತಿಯ ಪುರ್ವೀತ್,

(ನನ್ನ ಹಿಂದಿನ ಇ–ಮೇಲು ನಿನಗೆ ತಲುಪಿದ ಬಗ್ಗೆ ಸ್ಪಷ್ಟವಾಗಿ ತಿಳಿಯಲೇ ಇಲ್ಲ. ಹೋಗಲಿ ಬಿಡು. ಇನ್ನೊಂದನ್ನು (ಕೊನೆಯದೇ? ಗೊತ್ತಿಲ್ಲ) ಕಳಿಸುತ್ತಿದ್ದೇನೆ).

ಇತ್ತೀಚೆಗೆ ನೀನು ಪದೇಪದೇ ಹೇಳುತ್ತಿದ್ದ ಮಾತು ನನ್ನ ಅನೇಕ ಅನುಮಾನ, ಪ್ರಶ್ನೆಗಳಿಗೆ ಉತ್ತರವಾಗಿ ನೆನಪಾಗುತ್ತಿದೆ. ಡೋಂಟ್ ಬಿ ಲೈಕ್ ಎ ಪ್ಯಾರಾಸೈಟ್: ಟ್ರೈ ಟು ಬಿ ಎ ಫ್ರೀ ಅಂಡ್ ಇಂಡಿಪೆಂಡೆಂಟ್ ಪ್ಲಾಂಟ್. ಹೌದು. ನಾನು ನಿನಗೆ ಬಂದಳಿಕೆಯಂತೆ ಸದಾ ಬೆನ್ನಿಗೆ ಅಂಟಿಕೊಂಡು ಬಿಟ್ಟಿದ್ದೆ. ಅತ್ತ ನಿನ್ನನ್ನೂ ಸರಿಯಾಗಿ ಬೆಳೆಯಗೊಡದೆ, ಇತ್ತ ನಾನೂ ಸ್ವತಂತ್ರವಾಗಿ ಬೆಳೆಯದೇ ಇದ್ದುಬಿಟ್ಟೆ. ನಿನ್ನ ಮೇಲೆ ನಾನು ಅವಲಂಬಿತವಾಗಿದ್ದಕ್ಕೆ ಎಷ್ಟು ಉದಾಹರಣೆಗಳು? ಸ್ಕೂಟಿಯಿಂದ ಬಿದ್ದು ಕಾಲು ಮುರಿದುಕೊಂಡಾಗ ಆಸ್ಪತ್ರೆಗೆ ಸೇರಿಸಲು ನೀನು, ಸ್ಕೂಟಿಯ ರಿಪೇರಿಗೆ

